ಓ.ಎಸ್ಃ 11/2018
ಡಿ.ಡಬ್ಲ್ಯೂ: 01
ಅರವಿಂದ ಇಂಗಳೇಶ್ವರ

**ದಿನಾಂಕಃ 21-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು**
**ಮುಂದುವರೆದ ಪಾಟೀ ಸವಾಲು ವಾದಿ ಪರ ಶ್ರೀ ಎಸ್.ವಿ.ಎ. ವಕೀಲರಿಂದಃ**

**4**. ಸಾಕ್ಷಿಗೆ ನಿಪಿ-1 ಅನ್ನು ತೋರಿಸಲಾಯಿತು, ಅದರಲ್ಲಿರುವ ಸಹಿಯನ್ನು ನೋಡಿ ಗುರುತಿಸಲು ಹೇಳಿದಾಗ ಸಾಕ್ಷಿದಾರರು ನಾನು ಕನ್ನಡಕವನ್ನು ತಂದಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-1 ರಲ್ಲಿ ಕಾಣುತ್ತಿರುವ ಸಹಿ ಮತ್ತು ಫೋಟೋ ನನ್ನದೇ ಎಂದರೆ ಸಾಕ್ಷಿದಾರರು ಸರಿಯಾಗಿ ಉತ್ತರಿಸಿರುವುದಿಲ್ಲ. ನಾನು ವಾದಿಗೆ ನಾನು ಮಾಡಿಕೊಟ್ಟ ಖರೀದಿ ರದ್ದತಿ ಪತ್ರವನ್ನು ಮಾಡಿಕೊಡಿ ಎಂದು ಯಾವುದೇ ನೋಟಿಸು ನೀಡಿರುವುದಿಲ್ಲ. ನಿಡಿ-1 ರಲ್ಲಿರುವ ಸಹಿ ಮತ್ತು ಫೋಟೋ ವಾದಿಗೆ ಸೇರಿದ್ದಲ್ಲ ಎಂದರೆ ಸಾಕ್ಷಿದಾರರು ಸರಿಯಲ್ಲ ಎಂದು ನುಡಿಯುತ್ತಾರೆ. ನಿಡಿ-1 ಅನ್ನು ನಾನೇ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ದಾವಾ ಸ್ವತ್ತನ್ನು ಖರೀದಿ ಹಾಕಿಕೊಡಬೇಕಾಗುತ್ತದೆ ಎಂದು ಅದನ್ನು ತಪ್ಪಿಸಲು ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ಅನ್ನು ನಾನೇ ಸಹಿ ಮಾಡಿ ನೀಡಿದ್ದರೂ ಸಹಿತ ಅದನ್ನು ಉದ್ದೇಶಪೂರ್ವಕವಾಗಿ ಅಲ್ಲಗಳೆಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಗೆ 4 ಲಕ್ಷ ರೂ. ನೀಡಿದ್ದೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**
**ಓ ಹೇ ಕೇ ಸರಿ ಅದೆ.**

**(ತೇಜಸ್ವಿನಿ ಸೊಗಲದ)**
**ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**